

# ಬೀದಿಯಲ್ಲಿ ಅರಳುವ ಕಲೆ–ಕಾಳಜಿ

ಗುಡಿಸಿಲಿನಂತಹ ಆಕೃತಿಯ ಎದುರು ನಿಂತಿರುವ ವ್ಯಕ್ತಿ ವ್ಲಾಡಿಮಿರ್ ಒವ್ಚಿನ್ನಿಕೋವ್. ರಷ್ಯಾದ ಕಲಾವಲಯದಲ್ಲಿ ಒವ್ಚಿನ್ನಿಕೋವ್ ಅವರದು ಪರಿಚಿತ ಹೆಸರು. ಗೋಡೆ ಚಿತ್ರಗಳಿಗೆ ಈ ಕಲಾವಿದ ಹೆಸರುವಾಸಿ. ಚಾರಿತ್ರಿಕ ಬಿಂಬಗಳನ್ನು ಹಾಗೂ ಪ್ರಸಿದ್ಧ ವ್ಯಕ್ತಿಗಳನ್ನು ಗೋಡೆಗಳ ಮೇಲೆ ಮೂಡಿಸುವುದರಲ್ಲಿ ಪರಿಣತರು.

ಒವ್ಚಿನ್ನಿಕೋವ್ ಪದವಿ ಪಡೆದಿರುವುದು ಸಿವಿಲ್ ಎಂಜಿನಿಯರಿಂಗ್‌ನಲ್ಲಿ. ಎಂಜಿನಿಯರ್ ಆಗಿ ಮಾಸ್ಕೋದಲ್ಲಿ ದುಡಿದ ಅವರು, ನಿವೃತ್ತಿಯ ನಂತರ ಬೊರೊವ್ಸ್ಕ್ ನಗರಕ್ಕೆ ಬಂದು ನೆಲೆಸಿದರು. ಅವರೊಳಗಿನ ಕಲಾವಿದ ಜಾಗೃತಗೊಂಡಿದ್ದು ನಿವೃತ್ತಿಯ ನಂತರವೇ. ಶಾಲಾದಿನಗಳಲ್ಲಿನ ಕಲಾಪ್ರೀತಿ, ನಿವೃತ್ತಿಯ ನಂತರದ ಬಿಡುವಿನ ಸಮಯದಲ್ಲಿ ಜಾಗೃತಗೊಂಡಿತು. ಆದರೆ, ಚಿತ್ರ ಬಿಡಿಸುವುದು ಅವರ ಪಾಲಿಗೆ ಕಾಲಕ್ಷೇಪದ ಹವ್ಯಾಸವಲ್ಲ. ಅದು ಸಾಮಾಜಿಕ ಕಾಳಜಿಯ ನಿಟ್ಟಿನಲ್ಲಿ ಒದಗಿಬಂದಿರುವ ಸಂಗಾತಿ.

ಕಲೆಯನ್ನು ಪ್ರತಿರೋಧದ ರೂಪದಲ್ಲಿ ಬಳಸುತ್ತಿರುವುದು, ಒವ್ಚಿನ್ನಿಕೋವ್ ಅವರನ್ನು ಕಲಾವಿದರ ಸಾಲಿನಲ್ಲಿ ಭಿನ್ನವಾಗಿ ಗುರ್ತಿಸಲು ಕಾರಣ. ಸಮಾಜ ಮತ್ತು ವ್ಯವಸ್ಥೆಯ ಓರೆಕೋರೆಗಳ ವಿರುದ್ಧದ ಟೀಕೆ ಟಿಪ್ಪಣಿಗಳ ರೂಪದಲ್ಲಿ ಅವರ ಮ್ಯೂರಲ್‌ಗಳನ್ನು ಹಾಗೂ ರೇಖೆಗಳನ್ನು ರಷ್ಯಾದಲ್ಲಿ ಗುರ್ತಿಸಲಾಗುತ್ತದೆ. ಅವರ ಕಲಾಕೃತಿಗಳಲ್ಲಿ ಸಮಕಾಲೀನ ರಾಜಕಾರಣಕ್ಕೆ ಸಂಬಂಧಿಸಿದಂತೆ ಸೃಜನಶೀಲ ಕಲಾವಿದನೊಬ್ಬನ ಸ್ಪಂದನವನ್ನು ಕಾಣಬಹುದು. ಕಳೆದ ಎರಡು ದಶಕಗಳ ಅವಧಿಯಲ್ಲಿ ಅವರು ರೂಪಿಸಿರುವ ಮ್ಯೂರಲ್‌ಗಳು, ಭಿತ್ತಿಚಿತ್ರಗಳು ಸಹೃದಯರ ನಡುವೆ ಚರ್ಚೆಗೊಳಗಾಗಿವೆ. ಸಮಾಜದ ಓರೆಕೋರೆಗಳನ್ನು ಚರ್ಚಿಸಲು ಪ್ರೇರಣೆಯಾಗಿವೆ.

> ಸಾಮಾಜಿಕ ಕಾಳಜಿಯುಳ್ಳ ಬೀದಿ ನಾಟಕಗಳನ್ನು ನಮ್ಮಲ್ಲಿ ಚಳವಳಿಯ ರೂಪದಲ್ಲಿ ಗುರ್ತಿಸಲಾಗುತ್ತದೆ. ರಷ್ಯಾದ ಒವ್ಚಿನ್ನಿಕೋವ್ ಅವರಿಗೆ 'ಬೀದಿ ಕಲೆ' ಸಾಮಾಜಿಕ ಕಾಳಜಿಯ ಅಭಿವ್ಯಕ್ತಿಯಾಗಿ ಒದಗಿಬಂದಿದೆ.

ತನ್ನ ದೇಶದ ದಮನಕಾರಿ ರಾಜಕೀಯ ನಿಲುವನ್ನು ವಿರೋಧಿಸುವುದರ ಮೂಲಕ ಒವ್ಚಿನ್ನಿಕೋವ್ ಪ್ರಸ್ತುತ ಸುದ್ದಿಯಲ್ಲಿದ್ದಾರೆ. ಉಕ್ರೇನ್ ವಿರುದ್ಧದ ರಷ್ಯಾದ ಮಿಲಿಟರಿ ಕಾರ್ಯಾಚರಣೆ ವಿರುದ್ಧ ಅವರು ದನಿಯೆತ್ತಿದ್ದಾರೆ. ಗೋಡೆಗಳ ಮೇಲೆ ಅವರು ಬಿಡಿಸಿರುವ ಕಲಾಕೃತಿಗಳೇ ಪ್ರತಿರೋಧದ ದನಿಯಂತಿವೆ. ನಮ್ಮಲ್ಲಿ ಸಾಮಾಜಿಕ ಜಾಗೃತಿಗಾಗಿ ಬೀದಿ ನಾಟಕಗಳನ್ನು ಚಳವಳಿಯ ರೂಪದಲ್ಲಿ ಬಳಸುವಂತೆ, ಒವ್ಚಿನ್ನಿಕೋವ್ ತಮ್ಮ ಕಲೆಯನ್ನು ಬಳಸಿಕೊಳ್ಳುತ್ತಿದ್ದಾರೆ.

ಒವ್ಚಿನ್ನಿಕೋವ್ ಅವರಿಗೀಗ 85 ವರ್ಷ. ಬದುಕಿನ ಸಂಜೆ ಸಮಯದಲ್ಲೂ ಅವರ ಕ್ರಿಯಾಶೀಲತೆ ಕಾವು ಕಳೆದುಕೊಂಡಿಲ್ಲ. ಕಲೆಯ ಜೀವಂತಿಕೆ ಇರುವುದೇ ಸಮಾಜದ ಸ್ವಾಸ್ಥ್ಯಕ್ಕೆ ತುಡಿಯುವಲ್ಲಿ ಎನ್ನುವ ನಂಬಿಕೆ ಕೊಂಚವೂ ಮುಕ್ಕಾಗಿಲ್ಲ. ರಷ್ಯಾಕ್ಕೆ ಮಾತ್ರವಲ್ಲ, ಇಡೀ ಮನುಕುಲಕ್ಕೆ ಒವ್ಚಿನ್ನಿಕೋವ್ ಮಾದರಿ.

ಪ್ರತಿಕ್ರಿಯಿಸಿ: feedback@sudha.co.in